ಕುಂದಗೋಳ ನಗರಕ್ಕೆ ನೀರು ಪೂರೈಕೆಯ ಬಗ್ಗೆ

೯೫೮. ಶ್ರೀ ಬಿ.ಎ.ಉಪ್ಪಿನ್ (ಕುಂದಗೋಳ).— ಮಾನ್ಯ ಕಾನೂನು, ಸಂಸದೀಯ ವ್ಯವಹಾರ ಗಳು ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಂದಗೋಳ ನಗರಕ್ಕೆ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಆ ಬಗ್ಗೆ ಸರಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರಗಳು ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—

ಅ) ಬಂದಿದೆ.

ಆ) ೧೦೦.೦೦ ಲಕ್ಷ ರೂ.ಗಳ ಒಂದು ಅಂದಾಜು ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಸಿದ್ಧಪಡಿಸಿದ್ದು ಇದಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಎ. ಉಪ್ಪಿನ್.— ಕುಂದಗೋಳ ತಾಲ್ಲೂಕು ಸುಮಾರು ೧೮ ಸಾವಿರ ಜನಸಂಖ್ಯೆಯುಳ್ಳ ನಗರವಾಗಿದೆ. ಆಲ್ಲಿನೀರಿನ ಪರಿಸ್ಥಿತಿ ಎಷ್ಟೊಉಲ್ಬಣವಾಗಿದೆಎಂದರೆ,ಹೆಣ್ಣುಮಕ್ಕಳನ್ನುಹೆತ್ತಂತಹ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಕುಂದಗೋಳಕ್ಕೆ ಕೊಡುವುದಿಲ್ಲ ಎಂಬುದಾಗಿ ಹೇಳುತ್ತಿದ್ದಾರೆ. ಆಲ್ಲಿರ ತಕ್ಕ ಯುವಕರು ಮಾನ್ಯ ಮಂತ್ರಿಗಳ ರೀತಿಯಲ್ಲಿ ಬ್ರಹ್ಮಚಾರಿಗಳಾಗಿ ಇರಬೇಕಾದ ಸಂದರ್ಭ ಬಂದಿದೆ. ನಗರ ಸಭೆಯವರು ತಲಾ ಎರಡು ಗ್ಯಾಲನ್ ನೀರನ್ನು ಪೂರೈಸುತ್ತಿದ್ದಾರೆ. ಪರಿಸ್ಥಿತಿ ಬಹಳ ಕೆಟ್ಟಿದೆ. ಆಲ್ಲಿ ಜಲ ಮಂಡಲಿಯವರು ನೀರಿನ ಸೌಕರ್ಯದ ಸಲುವಾಗಿ ೧೯೮೬ನೇ ಫೆಬ್ರವರಿ ತಿಂಗಳಲ್ಲಿ ಆಡಳಿತಾತ್ಮಕ ಮಂಜೂರಾತಿಗಾಗಿ ಒಂದು ಪ್ರಪೋಸಲ್ಲನ್ನು ಕಳುಹಿಸಿದ್ದಾರೆ. ನಗರ ಸಭೆಯವರು ಅದಕ್ಕಾಗಿ ೫ ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ಆಡಳಿತಾತ್ಮಕ ಮಂಜೂರಾತಿ ಇಲ್ಲದ ಕಾರಣ ಆ ಹಣವನ್ನು ಉಪಯೋಗಿಸಲುವುದಕ್ಕಾಗಿಲ್ಲ. ಅದಕ್ಕಾಗಿ ೩೧-೩-೧೯೮೭ರ ಒಳಗಾದರೂ ಆ ಒಂದು ಯೋಜನೆಗೆ ಆಡಳಿತಾತ್ಮಕ ಮಂಜೂರಾತಿಯನ್ನು ಮಾನ್ಯ ಮಂತ್ರಿಗಳು ದೊರಕಿಸಿಕೊಡುತ್ತಾರೆಯೇ?

ಶ್ರೀ ಎ. ಲಕ್ಷ್ಮೀಸಾಗರ್.— ಸನ್ಮಾನ್ಯ ಅಧ್ಯಕ್ಷರೆ, ಆಡಳಿತಾತ್ಮಕ ಮಂಜೂರಾತಿಯನ್ನು ಕೊಡ ತಕ್ಕಂಥದ್ದು ತಾತ್ವಿಕವಾದ ಒಂದು ಭಾಗ. ಆದರೆ ಸಾರವಾದ ಇನ್ನೊಂದು ಭಾಗವೇನೆಂದರೆ ಒಂದು ಕೋಟಿ ರೂಪಾಯಿಗಳನ್ನು ಒದಗಿಸತಕ್ಕಂತಹದ್ದು. ಈ ಅಂದಾಜು ೨ ವರ್ಷಗಳ ಹಿಂದೆಯೇ ಮಾಡಿರ ತಕ್ಕಂತಹದ್ದು. ಈಗಿನ ದರಗಳಂತೆ ಅದನ್ನು ಪರಿಷ್ಕರಣೆ ಮಾಡಿದರೆ ಅದರ ವೆಚ್ಚ ಜಾಸ್ತಿಯಾಗುತ್ತ ದೆಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಮಂಖ್ಯವಾದ ಭಾಗ ಅದು, ಆದರೂ ಸಹಾನುಭೂತಿ ಯಿಂದ ಈ ವಿಚಾರವನ್ನು ಪರಿಶೀಲನೆ ಮಾಡುತ್ತೇನೆ ಎನ್ನುವ ಮಾತನ್ನು ಸನ್ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎ. ಉಪ್ಪಿನ್.— ಶಾಶ್ವತವಾದ ಯೋಜನೆಯನ್ನು ಪೂರೈಸುವುದಕ್ಕೆ ಸ್ವಲ್ಪ ನಿಧಾನವಾಗ ಬಹುದು. ಇತ್ತೀಚಿನ ಕೆಲವು ದಿನಗಳಲ್ಲಿ ಅಲ್ಲಿ ಕೊಳವೆ ಬಾವಿಯೊಂದನ್ನು ತೆಗೆದಿದ್ದು ಅದರಲ್ಲಿ ಒಂದು ಗಂಟೆಗೆ ೨ ಸಾವಿರ ಗ್ಯಾಲನ್ ನೀರು ಬರುತ್ತದೆ. ಅದಕ್ಕೆ ಮಿಷನ್ ಅನ್ನು ಜೋಡಿಸಿದರೆ, ನಗರದ ಜನರಿಗೆ ನೀರನ್ನು ಒದಗಿಸುವುದಕ್ಕೆ ಸಹಾಯಕವಾಗಬಹುದು. ೫ ಲಕ್ಷ ರೂಪಾಯಿಗಳನ್ನು ಏನು ತೆಗೆದಿ ಟ್ಟಿದ್ದಾರೆ. ಅದಕ್ಕೆ ತಾವು ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟರೆ ೩೧-೩-೧೯೮೭ರವರೆಗೆ ಖರ್ಚು ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.— ಈ ವರ್ಷ ಬೇಸಿಗೆ ಕಾಲದಲ್ಲಿ ಅಲ್ಲಿನ ಜನರಿಗೆ ತೊಂದರೆಯಾಗಂ ತ್ತದೆಂಬುದನ್ನು ಮನಗಂಡು ಕೊಳವೆ ಬಾವಿಗಳನ್ನು ಹಾಕಿಸಿಕೊಡುವ ಆಶ್ವಾಸನೆಯನ್ನು ಸನ್ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ.